ವಿದ್ಯಾನಾಗ್, ಬೆಂಗಳೂರು

*ಗೋಮುಖ ವ್ಯಾಘ್ರನಿಗೂ, ವ್ಯಾಘ್ರಮುಖ ಗೋವಿಗೂ ಏನು ವ್ಯತ್ಯಾಸ?*



ಒಂದು ಜೀವನ ನಾಟಕದಲ್ಲಿ ಮೆರೆಯುತ್ತದೆ, ಮತ್ತೊಂದು ಕೇವಲ ನಾಟಕದಲ್ಲಿ ಮೆರೆಯುತ್ತದೆ.

ಡಿ.ಎಲ್. ನಾಗರಾಜ್, ಚನ್ನಗಿರಿ

*ಹೆಂಡತಿಗೆ ಸಹಧರ್ಮಿಣಿ ಎಂದು ಹೆಸರು ಬರಲು ಕಾರಣವೇನು?*

ಸಹನೆಯಿಂದ ಕೇವಲ ಧರ್ಮಕ್ಕೆ (ಬಿಟ್ಟಿ) ದುಡಿಯುವುದರಿಂದ!

ವಿ. ಹಮೀದ್, ವಿಟ್ಲ

*ಪ್ರೇಮಿಯ ತೋಳತೆಕ್ಕೆಯನ್ನು ಸದಾ ಆಶಿಸುವ ಹುಡುಗಿಗೆ ಏನೆನ್ನಲಿ?*

ಹೋಟೆಲ್ ಮಾಲಿಕನನ್ನೇ ಪ್ರೇಮಿಸು ಎನ್ನಿ; ಅಡಿಗೆಯ ಗೊಡವೆ ಇಲ್ಲದೆ ಅಡಿಗಡಿಗೆ ಪ್ರೇಮಿಸಬಹುದು!

ವಿರಾಜ್, ಅಡೂರು

*ಇಲ್ಲೊಬ್ಬರು ಸತ್ತ ಮೇಲೆ ಸಮಾಜ ಸೇವೆ ಮಾಡೋಣ ಅಂತಿದ್ದಾರೆ. ಅದರ ಗೂಢಾರ್ಥವೇನು?*

ಸರಿಯೇ; ಕೆಲವರು ಸಾಯುವುದೇ ಅವರು ಸಮಾಜಕ್ಕೆ ಮಾಡುವ ಏಕೈಕ ಮಹದುಪಕಾರ!

ಸವಿರವಿ, ಬಾಳೆಹೊನ್ನೂರು

*ಆನೆಯ ಮೂಗು (ಸೊಂಡಿಲು) ಯಾಕೆ ಅಷ್ಟು ಉದ್ದ?*



ಘಾಟು ನಿಧಾನಕ್ಕೆ ತಲೆಗೇರಲಿ ಎಂದು!

ಬಸವಣ್ಣ ಹೊನಖಾಂಡೆ, ಬಸವನ ಬಾಗೇವಾಡಿ

*ಬದುಕಿನಲ್ಲಿ ನೀವು ಸತ್ತ ವರ್ಷಗಳೆಷ್ಟು?*

ಕ್ಷಮಿಸಿ. ನಗುತ್ತಾ, ನಗಿಸುತ್ತಲೇ ಇರುವುದರಿಂದ ನಾನು ಸತ್ತೇ ಇಲ್ಲ; ಈ ಅಂಕಣ ಬರೆದಿರುವುದರಿಂದ ಚಿರಂಜೀವಿ!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ

*ಕುಡುಕ ಗಂಡ ಇರಬೇಕು, ಕೆಡುಕ ಗಂಡ ಬೇಡ ಎನ್ನುತ್ತಾಳೆ, ಏಕೆ?*

ನಶೆ ಇಳಿಸಲು ಒಂದು ಕೊಡ ನೀರು ಸಾಕು; ವಿಷ ಇಳಿಸಲು ಜೀವಮಾನವೂ ಸಾಲದು.

ಸಾರಂಗ್, ಬೆಂಗಳೂರು

*ಸದನದಲ್ಲಿ ನಿದ್ರಿಸುವುದಕ್ಕೂ, ಅಶ್ಲೀಲ ದೃಶ್ಯ (ವಿಡಿಯೋ)ನೋಡುವುದಕ್ಕೂ ಏನು ವ್ಯತ್ಯಾಸ?*

ಒಂದು ಪಾಲುಮಾರಿಕೆ, ಮತ್ತೊಂದು ಪಾಲೆಮಾರಿಕೆ!

ಎಂ.ಎನ್. ಸೋಮಶೇಖರ್, ಮೈಸೂರು

*ಕೆಂಪುಗುಲಾಬಿಗೂ, ಯುವಕ- ಯುವತಿಯರ ಪ್ರೇಮಕ್ಕೂ ಇರುವ ನಿಕಟ ಸಂಬಂಧವೇನು?*

ಪ್ರೇಮವೂ ಗುಲಾಬಿಯಂತೆಯೇ ಕೆನ್ನೆ ಕೆಂಪೇರಿಸುವ ಮಟ್ಟದವರೆಗೆ ಚೆನ್ನ, ಹಳತಾದಾಗ ದಳದಳನೆ ಉದುರುವಿಕೆ!

ಮಲ್ಲೇಶ ಕೆ. ಗುಂಡ್ಲುಪೇಟೆ

*ಇತ್ತೀಚೆಗೆ ನೈತಿಕ ಮೌಲ್ಯಗಳು ಕುಸಿಯುತ್ತಿರಲು ಯಾವುದು ಪ್ರಬಲ ಕಾರಣ?*

ಪಶ್ಚಿಮದ ಸಂಸ್ಕೃತಿಯ ತರಂಗಗಳಿಂದ ನಮ್ಮ ನೆಲೆಗಟ್ಟಿನಲ್ಲಾದ ಭೂಕಂಪ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಅಲ್ರಣ್ಣ, ಕೃಷ್ಣ ನಾರಿಯರ ಸೀರೆ ಕದಿಯುವುದಕ್ಕೂ, ಅದನ್ನು ದ್ರೌಪದಿಗೆ ಕೊಡುವುದಕ್ಕೂ ಏನಾದರೂ ಸಂಬಂಧವಿದೆಯಾ?*

ಇದೆ. ಅವನು ರೀಟೈಲಾಗಿ ಕದ್ದದ್ದೇ ಇವಳಿಗೆ ಹೋಲ್‌ಸೇಲಾಗಿ ಸಪ್ಲೈ ಮಾಡಲೆಂದು!

ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

*ಹುಡುಗ, ಹುಡುಗಿಯರಲ್ಲಿ ಯಾರು ಪ್ರಪೋಸ್ ಮಾಡಬೇಕು?*

ಹುಡುಗನೇ; ಅವಳು ಪೋಸ್ ಕೊಟ್ಟರೆ ಸಾಕು, ಇವನು ಪ್ರಪೋಸ್ ಮಾಡುತ್ತಾನೆ!

ವಿ.ಎಸ್. ಹಿಂದೂಪುರ, ಬಳ್ಳಾರಿ

*ಇಬ್ಬರು ಹೆಂಡತಿಯರು ಮತ್ತು ಸಾಲ ಇದ್ದವನ ಸ್ಥಿತಿ ಹೇಗಿರಬಹುದು?*

ಝುಂ ಎಂದು ಇರಬಹುದಾತ. ಇವನ ಸಾಲ ತೀರಿಸಲು ಎರಡೆರಡು ಮಾವಂದಿರು ಇರುತ್ತಾರಲ್ಲಾ!

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಎಷ್ಟೋ ತಿನಿಸುಗಳು ಮನೆಯಲ್ಲಿ ರುಚಿಸದಿದ್ದರೂ ಹೊಟೆಲ್‌ನಲ್ಲಿ ರುಚಿಸಲು ಕಾರಣ...?*

ಅಮ್ಮಾವ್ರ ಕೈಗುಣ!

## ಬಹುಮಾನಿತ ಪ್ರಶ್ನೆ

ಜೀವಿ, ಗೊಂಡೇದಹಳ್ಳಿ

*ಲಂಚ ಬಾರದ ಉಪನ್ಯಾಸಕನಿಗಿಂತ ಕಾನ್ಸ್‌ಟೇಬಲ್‌ನನ್ನು ಮದುವೆಯಾಗಿದ್ದರೆ ನೆಮ್ಮದಿಯಾಗಿರುತ್ತಿದ್ದೆ ಎಂದು ನನ್ನಾಕೆ ಗೊಣಗುತ್ತಾಳಲ್ಲಾ...?*

ಸರಿಯೇ; ಆರಂಗಡಿಯಿಟ್ಟೊಡೆಂ ಸೆಳೆವ ಲಂಚಪಣಂ ಪೊಲೀಸು ಪೇದೆಯುಂ ಅಲ್ತೇ!

ವಿನಾಯಕ ಹೆಗಡೆ, ಭೈರುಂಬೆ

*ಡೈವೋರ್ಸ್ ಪಡೆದ ಮಹಿಳೆ ವಿಧವೆಯೋ ಅಥವಾ ಮುತ್ತೈದೆಯೋ?*

ವಿವಿಧವೆ!

ಅಶ್ವಿನಿ ವಿ. ಹೆಗಡೆ, ಭೈರುಂಬೆ

*ನಾವು ಕೆಲಸವಿಲ್ಲದೆ ಕಳುಹಿಸುವ ಪ್ರಶ್ನೆಗಳಿಗೆ ನೀವು ಉತ್ತರಿಸುತ್ತೀರಲ್ಲಾ, ನಿಮ್ಮ ದಡ್ಡತನಕ್ಕೆ ಏನೆನ್ನಬೇಕು?*

ಕೆಲಸವಿಲ್ಲದ, ಬಿಡುವಿನ ವೇಳೆಯಲ್ಲಿ ನೀವು ಕನ್ನಡ ಬರೆಯುವುದನ್ನು ಪ್ರೋತ್ಸಾಹಿಸಲು ನಿಮ್ಮ ಎಂತಹ ದಡ್ಡ ಪ್ರಶ್ನೆಗೂ ಉತ್ತರಿಸುವುದು ನನ್ನ ಜವಾಬ್ದಾರಿ!

ಗೀತಾ ಬರ್ಲ, ಬೆಂಗಳೂರು

*ದೈಹಿಕವಾಗಿ ಗಂಡು ಹೆಣ್ಣಿಗಿಂತ ಬಲಾಢ್ಯನಾಗಿರಲು ಕಾರಣವೇನು?*



ಬರೀ ಸುಳ್ಳು; ಹೆರಿಗೆ ನೋವಿರಲಿ, ತಿಂಗಳಿನ ನೋವನ್ನೂ ಅವನು ತಡೆಯಲಾರ!

ಕಾಳೀಹುಂಡಿ ಶಿವಕುಮಾರ್, ಮೈಸೂರು

*ಅನುಮಾನಿಸುವವಳಿಗೂ, ಹಿಂಬಾಲಿಸುವವಳಿಗೂ ಇರುವ ವ್ಯತ್ಯಾಸವೇನು?*

ಒಬ್ಬಳು ಊಹಾಮೃಗ, ಮತ್ತೊಬ್ಬಳು ಈಹಾಮೃಗ!

ಎಂ.ಎಸ್. ಧರ್ಮೇಂದ್ರ, ಜಿಟಿಆರ್‌ಇ. ಕ್ಯಾಂಪಸ್

*ಚಲನಚಿತ್ರದಲ್ಲಿ ಮರ ಸುತ್ತುವ ನಾಯಕಿಗೂ, ಉದ್ಯಾನದಲ್ಲಿ ಸ್ಲಿಮ್ ಆಗಲು ಸುತ್ತುವ ಹೆಂಗಸರಿಗೂ ಏನು ವ್ಯತ್ಯಾಸ?*

ಅವಳು ಸ್ಲಿಮ್ಮು, ಇವರು ಡ್ರಮ್ಮು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಏನು? ಸತ್ಯವನ್ನು ಸಾಯಿಸಲು ಯಾರಿಂದಲೂ ಸಾಧ್ಯವಿಲ್ಲವಂತೆ?*

ಜೋರಾಗಿ ಹೇಳಬೇಡಿ; ವಕೀಲರು ಕೇಸ್ ಹಾಕಿಬಿಟ್ಟಾರು!

ರಾಮ್